DFA/2473061

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ "ಡಿ" ಸೋಜಾ ರವರು**
**ನಿಯಮ 72 ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ:**

ದ.ಕ ಜಿಲ್ಲೆಯ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 60 ಮಂದಿ ಅಧಿಕಾರಿ/ಸಿಬ್ಬಂದಿ ವರ್ಗಕ್ಕೆ ಪ್ರಾಧಿಕಾರವು ದಿನಾಂಕ:24.12.2019 ರಿಂದ ಜಾರಿಗೆ ಬಂದರು ಕಳೆದ 6 ವರ್ಷಗಳಿಂದ ಯಾವುದೇ ಹುದ್ದೆಗಳು ಸೃಜಿಸಲಾಗದೇ ಸೂಕ್ತ ನಿಯಮಗಳನ್ನು ರಚಿಸದೇ ನೇಮಕಾತಿ ನಿಯಮ ಇಲ್ಲದೇ ಅತಂತ್ರ ಸ್ಥಿತಿಯಲ್ಲಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನದಿಂದ ವಂಚಿತರಾಗಿರುವ ಘಟನೆ ನಡೆದು ಸೇವಾ ಅಭದ್ರತೆ ಕಾಡುತ್ತಿರುವುದರಿಂದ ಕೂಡಲೇ ನಿಯಮಾನುಸಾರ ವೇತನ ಶ್ರೇಣಿಯನ್ನು ಸರ್ಕಾರದಿಂದ ಒದಗಿಸಿಕೊಡುವ ಕುರಿತು.

**ಉತ್ತರ:** ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಸೊಸೈಟಿ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯು 2018 ರಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 08 ಶಾಸನ 2018 ದಿನಾಂಕ:09.03.2018 ರನ್ವಯ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ರಚನೆಗೊಂಡು 2021 ರಿಂದ ಕಾರ್ಯನಿರ್ವಹಿಸುತ್ತಿದೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಅವಶ್ಯಕವಿರುವ ಹುದ್ದೆಗಳು, ಹುದ್ದೆಗಳ ಸಂಖ್ಯೆ ಮತ್ತು ಸದರಿ ಹುದ್ದೆಗಳು ಪ್ರಾಧಿಕಾರದ ನಿರ್ವಹಣೆಗೆ ಅಗತ್ಯವಿರುವ ಬಗ್ಗೆ ಸೂಕ್ತವಾದ ಕಾರಣ ಮತ್ತು ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಪ್ರಾಧಿಕಾರಕ್ಕೆ ತಿಳಿಸಲಾಗಿದ್ದು. ಅದರಂತೆ, ಪ್ರಾಧಿಕಾರದಡಿ ವಿವಿಧ ವಿಭಾಗಗಳಿದ್ದು, ಆಯಾಯ ವಿಭಾಗಗಳಿಗೆ ಅಗತ್ಯವಿರುವ ಹುದ್ದೆಗಳ ಗುರುತಿಸುವಿಕೆಯ ಬಗ್ಗೆ ಸಂಬಂಧಪಟ್ಟ ವಿವಿಧ ಸರ್ಕಾರಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಪ್ರಾಧಿಕಾರದಲ್ಲಿ ಕ್ರಮವಹಿಸಲಾಗುತ್ತಿದೆ. ಸದರಿ ಇಲಾಖೆಗಳು ವರದಿ ನೀಡಿದ ನಂತರ ಸದರಿ ವರದಿಯನ್ನು ಪ್ರಾಧಿಕಾರದ ಜಿಲ್ಲಾ ಮಟ್ಟದ ಸಭೆಯಲ್ಲಿ ಮಂಡಿಸಿ, ಸಭೆಯ ನಿರ್ಣಯದಂತೆ ಹೊಸ ಪ್ರಸ್ತಾವನೆಯನ್ನು ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುತ್ತದೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಹಿಂದೆ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಸೊಸೈಟಿ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಯಥಾವತ್ತಾಗಿ ಮುಂದುವರಿಸಿಕೊಂಡು ಬಂದಿದ್ದು, ಸದರಿ ಸಿಬ್ಬಂದಿಗಳಿಗೆ ವೇತನದ ಜೊತೆಗೆ ನಿಯಮಾನುಸಾರ ವಾರ್ಷಿಕ ವೇತನ ಹೆಚ್ಚಳ, ಮಧ್ಯಂತರ ಪರಿಹಾರ ಭತ್ಯೆ, ಇಪಿಎಫ್, ಇಎಸ್ಐ/ವೈದ್ಯಕೀಯ ಇನ್ಸೂರೆನ್ಸ್, ಗ್ರಾಚ್ಯೂಯಿಟಿ, ಅಪಘಾತ ವಿಮೆ, ಸಾಂದರ್ಭಿಕ/ವೈದ್ಯಕೀಯ ರಜೆಯ ಸೌಲಭ್ಯಗಳನ್ನು ಪ್ರಾಧಿಕಾರದ ಅನುಮೋದನೆಯೊಂದಿಗೆ ನೀಡಲಾಗುತ್ತಿದೆ.

**ಐಟಿಬಿಟಿ 420 ಎಸ್ ಟಿಎಸ್ 2025**

(ಎನ್.ಎಸ್.ಭೋಸರಾಜು)
ಮಾನ್ಯ ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.
**ಎನ್.ಎಸ್. ಭೋಸರಾಜು**
**ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು**



File No. ITBT/420/STS/2025-SO ST-ITBT SEC (Computer No. 1997342)
Generated from eOffice by boseraju, S&T - MIN(BU), MINISTER, MINISTER - SCIENCE AND TECHNOLOGY on 16/12/2025 08:57 AM